***ದಿನಾಂಕಃ 11.02.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.***

**ಮುಂದುವರೆದ ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಟಿ ನರಸಿಪುರದ ಸೇತುವೆ ಬಳಿ ಪೊಲೀಸ್ ರು ಮಹಜರ್ ನ್ನು ಜರುಗಿಸಿರುತ್ತಾರೆ. ಈಗ ನಾನು ಸದರಿ ಮಹಜರ್ ನ್ನು ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಮಹಜರ್ ನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಚೆಕ್ ಬೌನ್ಸ ಆದ ಕಾರಣ ನಾನು ನ್ಯಾಯಾಲಯದಲ್ಲಿ ಸಲ್ಲಿಸಿದ ಪಿರ್ಯಾದಿ ಹಾಗೂ ಸದರಿ ಪ್ರಕರಣದ ಆರ್ಡರ್ ಶೀಟಿನ ದೃಡೀಕೃತ ನಕಲನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುತ್ತಿದ್ದೇನೆ ಸದರಿ ದಾಖಲೆಗಳನ್ನು ನಿಪಿ-8 ಹಾಗೂ 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ-**

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿದ್ದು, ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

**11.02.2020**

*1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*